

ಅದು ಅಸಹಕಾರ ಚಳವಳಿಯ ಕಾಲ. ದೇಶದಲ್ಲೆಲ್ಲ ಚಳವಳಿಯ ಕಾವೇರಿದ ವಾತಾವರಣವಿತ್ತು. ಆ ವೇಳೆಯಲ್ಲಿ ರುದ್ರಾಪುರದಲ್ಲಿ ಚಳವಳಿಯ ಕಾವು ಏರಿಸಲು, ಗ್ರಾಮದ ಜನರಲ್ಲಿ ಕಿಚ್ಚನ್ನು ಮೂಡಿಸಲು ಗ್ರಾಮಕ್ಕೆ ಭೇಟಿಯಿತ್ತ ದೇಶಪ್ರೇಮಿ ಗಂಗಾಧರರಾಯರು ಗ್ರಾಮೀಣ ಜನರನ್ನು ಉದ್ದೇಶಿಸಿ ಮಾತಾಡಿ ಊರ ಅಗಸಿ ಮುಂದೆ ನೆಟ್ಟಂತಹ ಗಿಡವದು. ಆಲದ ಮರದಂತೆ ಜನರಲ್ಲಿ ದೇಶಭಕ್ತಿ, ಕಿಚ್ಚು, ಚಳವಳಿಯ ಕಾವು ಬೆಳೆಯಲಿ ಎಂದು ನೆಟ್ಟ ಆ ಮರ ನೋಡ ನೋಡುತ್ತಿದ್ದಂತೆಯೆ ಹೆಮ್ಮರವಾಗಿ ಬೆಳೆಯಹತ್ತಿತು. ರಾಯರ ಹಸ್ತ ಗುಣವೋ, ಮಣ್ಣಿನ ಗುಣವೋ ಏನೋ ಕೆಲವೇ ವರ್ಷಗಳಲ್ಲಿ ಬೃಹತ್ ರೂಪ ತಾಳಿತು. ಎರಡು ಬಾವಿ ಹಗ್ಗ ಸುತ್ತಿದರೂ ಗಂಟು ಹಾಕಲು ಬಾರದ ಅದರ ಬೊಡ್ಡೆಯಿಂದ ವಿಶಾಲವಾಗಿ ಅಷ್ಟ ದಿಕ್ಕುಗಳಿಗೂ ಹಬ್ಬಿಕೊಂಡಿರುವ ಬೃಹತ್ ಬಾಹುಗಳಂತಿರುವ ಟೊಂಗೆಗಳು, ಟೊಂಗೆಗಳಿಂದ ತೆಂಗಿನ ಹುರಿಯಂತೆ ಇಳಿ ಬಿದ್ದಿರುವ ಬಿಳಲು, ಎತ್ತರ ಬಿತ್ತರದ ಮರ ಆಗಿನಿಂದಲೂ ನೂರಾರು ಜನಕ್ಕೆ ಬೇಸಿಗೆಯಲ್ಲಿ ಬೇಗೆಯಿಂದ, ಮಳೆಗಾಲದಲ್ಲಿ ಮಳೆಯಿಂದ ರಕ್ಷಿಸುತ್ತ ನಿಂತಿದೆ. ಬೃಹತ್ ಕವಲುಗಳಿಂದ, ದಟ್ಟವಾದ ಹಸಿರೆಲೆಗಳಿಂದ, ರವಿಯ ಕಿರಣಗಳು ಇಳೆಗೆ ತಾಗದಂತೆ ನಿಂತಿರುವ ಆ ಮರದ ಬಿಳಲುಗಳೊಂದಿಗೆ ಮುಂಜಾನೆಯಿಂದ ಸಂಜೆಯವರೆಗೂ ಜೋಕಾಲಿಯಾಡುವ ಮಕ್ಕಳಿಗಂತೂ ಆಡುಂಬೊಲ. ಅದರ ಕಟ್ಟೆಯ ಮೇಲೆ ಊರಿನ ಜನರು ಮಧ್ಯಾಹ್ನ ಊಟವಾದ ನಂತರ ತಮ್ಮ ಟವೆಲು ಹಾಸಿ ಮಲಗಿದರಂತೂ ತೀರಿತು. ಯಾರಾದರೂ ಬಂದು ಎಚ್ಚರಿಸಿದಾಗಲೇ ನಿದ್ದೆಯಿಂದ ಮುಕ್ತಿ. ಊರಿನಲ್ಲಿ ಪಂಚಾಯತಿ ಚಾವಡಿ ಇದ್ದರೂ, ಊರಿನ ಸಮಸ್ತ ವಾದ, ವಿವಾದಗಳು ಈ ಆಲದ ಮರದಡಿಯಲ್ಲಿ ತೀರ್ಮಾನವಾಗಬೇಕು. ಹಿರಿಯ ಸ್ವಾತಂತ್ರ್ಯ ಯೋಧರು ಹಚ್ಚಿದ ಆ ಮರದ ಬಗ್ಗೆ ಊರವರಿಗೆ ಭಕ್ತಿ ಹಾಗೂ ಗೌರವ. ಈಗ ಅಂತಹ ಮರವನ್ನು ಕಡಿದು ಅದರ ಜಾಗದಲ್ಲಿ ಮಂಗಲ ಭವನ ಕಟ್ಟೋಣ ಅಂತ ಕೆಲವು ಹಳ್ಳಿಗರ ತಲೆ ತುಂಬಿರುವ ಪಂಚಾಯತಿ ಚೇರಮನ್ ಪಂಚಾಕ್ಷರಿ, ಅವನಿಗೆ ಕೆಲವು ಜನರಿಂದ ಒಳಗಿಂದೊಳಗೆ ಬೆಂಬಲ. ಆದರೆ, ಪರಪ್ಪಜ್ಜನಂತೂ ಕಟ್ಟಾ ವಿರೋಧಿ. ಅವರದು ಆ ಮರದೊಂದಿಗೆ ಕರುಳಬಳ್ಳಿಯ ಸಂಬಂಧ. ಪ್ರಾಣ ಹೋದರೂ ಸರಿಯೇ, ಅದಕ್ಕೆ ಒಂದೇಟು ಬೀಳಬಾರದೆಂಬುದು ಅವರ ನಿಲುವು. ಅದನ್ನು ತಿಳಿದುಕೊಳ್ಳಬೇಕೆಂದರೆ, ಪರಪ್ಪಜ್ಜನ ಹುಟ್ಟಿನ ವೃತ್ತಾಂತಕ್ಕೆ ಹೋಗಬೇಕು.

ಪರಪ್ಪಜ್ಜನಿಗೂ ಹೆಚ್ಚು ಕಡಿಮೆ ಆ ಮರದಷ್ಟೆ ವಯಸ್ಸು. ಒಂದು ಅಥವಾ ಒಂದೂವರೆ ವರ್ಷ ಚಿಕ್ಕವರಿರಬಹುದು ಅಷ್ಟೆ. ಅವರ ತಂದೆ ಮಾದೇವಪ್ಪನವರದು ಊರಲ್ಲಿ ಶ್ರೀಮಂತ ಕುಟುಂಬ. ಸಾಕಷ್ಟು ಜಮೀನು, ಆಳುಕಾಳುಗಳಿಂದ ಕೂಡಿದ ಸುತ್ತ ಹತ್ತಾರು ಹಳ್ಳಿಗಳಿಗೂ ದೊಡ್ಡ ಮನೆತನ. ಧಣೇರ ಮನೆತನವೆಂದೆ ಪ್ರತೀತಿಯಾಗಿತ್ತು. ಬರಗಾಲದ ಸಂದರ್ಭಗಳಲ್ಲಿ ಇಡೀ ಊರಿಗೆ ಕಾಳು ಕಡಿ ಈ ಮನೆಯಿಂದಲೆ ಸರಬರಾಜು ಆಗಬೇಕು. ಅಂತಹ ಸಿರಿತನದ ಮನೆತನ ಅದು. ಅಲ್ಲದೆ ಮಾದೇವಪ್ಪನವರು ಹಾಗೂ ಅವರ ಮಡದಿ ಪಾರ್ವತಮ್ಮನವರು ಉದಾರ ಮನಸ್ಸಿನವರು. ದಿನಂಪ್ರತಿ ಮನೆಯಲ್ಲಿ ಆಳು ಕಾಳು ಸೇರಿದಂತೆ ನಲವತ್ತು–ಐವತ್ತು ಜನರಿಗೆ ಊಟ ಆಗಲೇಬೇಕು. ಅತಿ ದೇಶಪ್ರೇಮದ ಕುಟುಂಬವಾದ್ದರಿಂದ ಹಾಗೂ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ನಿಕಟವಿದ್ದುದರಿಂದ ಇಂಗ್ಲಿಷರಿಂದ ಕಿರುಕುಳ ಅನುಭವಿಸಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ಮಾದೇವಪ್ಪನವರ ಪತ್ನಿಗೆ ಚೊಚ್ಚಿಲ ಹೆರಿಗೆ ನೋವು ಕಾಣಿಸಿಕೊಂಡಾಗ ಪಕ್ಕದೂರಿನ